ಶೌರ್ಯ ಶಶಾಂಕ್ ರಮಿತಾ

ಝೀ ಪವರ್‌ನ 'ರಾಜಕುಮಾರಿ'ಯ ಶೌರ್ಯ

# ಏನೂ ಗೊತ್ತಾಗದೆ ಮಾಡೆಲಿಂಗ್ ಮಾಡಿದೆ



◆ ಖಳನಾಯಕನಿಗೆ ನಾಯಕನ ಪಾತ್ರ. ಏನಿದು ವಿಶೇಷ?

ಬಹುತೇಕ ಸೀರಿಯಲ್‌ಗಳಲ್ಲಿ ಇಷ್ಟು ದಿನ ನೆಗೆಟಿವ್ ಪಾತ್ರಗಳನ್ನೇ ಮಾಡಿಕೊಂಡು ಬಂದಿದ್ದೇನೆ. ನನಗೆ ಅತಿ ಹೆಚ್ಚು ಇಷ್ಟ ಆಗುವುದು ಅಂತಹ ಪಾತ್ರಗಳೇ. ಪರ್ಫಾರ್ಮೆನ್ಸ್ ದೃಷ್ಟಿ ಮುಖ್ಯ ಆಗುತ್ತದೆ. ಅಲ್ಲಿ ನಟನೆಗೆ ಭಿನ್ನ ಆಯಾಮಗಳು ಸಿಗುತ್ತವೆ. ಪಾತ್ರಕ್ಕೆ ಬೇರೆ ಬೇರೆ ಛಾಯೆ ಕೂಡ ಇರುತ್ತೆ. ನಾಯಕ ಆಗಬೇಕು ಎನ್ನುವ ಆಸೆಯೂ ಇದೆ. ಎಲ್ಲಾ ಕಡೆ ಪ್ರಾಮುಖ್ಯ ಸಿಗುತ್ತದೆ. ವೀಕ್ಷಕರನ್ನು ದೊಡ್ಡಮಟ್ಟದಲ್ಲಿ ತಲುಪಲು ಟೈಟಲ್ ಪಾತ್ರವನ್ನು ಮಾಡಬೇಕು. ಅದೇ ಕಾರಣಕ್ಕೆ ಈ ಪಾತ್ರವನ್ನು ಆಯ್ಕೆ ಮಾಡಿಕೊಂಡೆ. ಎಷ್ಟೇ ಚೆನ್ನಾಗಿ ನಟಿಸಿದರೂ ಜನ ಒಳ್ಳೆಯತನವನ್ನೇ ಇಷ್ಟಪಡುವುದು. ಈ ಪಾತ್ರವನ್ನು ನಾನು ಸುಮ್ಮನೆ ಒಪ್ಪಿಲ್ಲ. ನಾನು ಸಿಹಿ ಪದಾರ್ಥವನ್ನು ತುಂಬ ಇಷ್ಟಪಡುತ್ತೇನೆ. ಹಾಗೆಯೇ ಖಾರವನ್ನೂ ಸಮಾನವಾಗಿಯೇ ತಿನ್ನುತ್ತೇನೆ. ಈ ಪಾತ್ರಕ್ಕೆ ಸಿಹಿ ಅಂದರೆ ಆಗುವುದಿಲ್ಲ. ನನ್ನ ಹೆಸರಿನ ಪಾತ್ರಕ್ಕೆ ಸಿಹಿ ಇಷ್ಟ ಇಲ್ಲ ಅಂದರೆ ಏನೋ ಇದರಲ್ಲಿ ಆವಿಷ್ಕರಿಸುವ ಅಂಶ ಇದೆ ಎಂದು ಅನ್ನಿಸಿತು. ಸಿಹಿ ನಿರಾಕರಣೆ ಕೂಡ ಗೊತ್ತಾಗುತ್ತದೆ.

◆ ಮಾಡೆಲಿಂಗ್‌ನಿಂದ ನಟನೆಗೆ ಬಂದಿದ್ದು ಹೇಗೆ?

ಮೊದಲಿನಿಂದಲೂ ನಾಟಕದಲ್ಲಿ ಅಭಿನಯಿಸುವುದು ಇಷ್ಟ. ಪ್ರೌಢ ಶಾಲೆಯಿಂದಲೇ ಬಣ್ಣದ ಮೋಹ ಹುಟ್ಟಿತು. ಅಜ್ಜಿ ಮತ್ತು ನನಗೆ ಸಿನಿಮಾ ಹುಚ್ಚು ವಿಪರೀತ. ಅಜ್ಜಿ ಎಲ್ಲ ಭಾಷೆಯ ಸಿನಿಮಾ ತೋರಿಸುತ್ತಿದ್ದರು. ಸಿನಿಮಾ ಒಲವು ಬಂತು. ಮಾಡೆಲಿಂಗ್ ಆಸೆ ಇರಲಿಲ್ಲ. ಏನು ಮಾಡಬೇಕು ಎನ್ನುವುದು ಗೊತ್ತಿರಲಿಲ್ಲ. ಏನೋ ಮಾಡಬೇಕು ಎಂದು ಮಾಡೆಲಿಂಗ್ ಮಾಡಿದೆ. ಅದನ್ನೇನು ಫುಲ್ ಟೈಮ್ ಮಾಡಿರಲಿಲ್ಲ. ಟೀವಿ–ಸಿನಿಮಾ ಕಡೆಯೇ ನನ್ನ ದೃಷ್ಟಿ ಇತ್ತು. ಅಂತಿಮ ಆಯ್ಕೆ ಸಿನಿಮಾ ಎನ್ನುವುದೂ ಸ್ಪಷ್ಟವಿತ್ತು. ಸಿನಿಮಾ ಕ್ಷೇತ್ರದಲ್ಲಿ ಪರಿಚಿತರು ಯಾರೂ ಇರಲಿಲ್ಲ. ನಮ್ಮಂತಹ ಹೊಸ ತಲೆಮಾರಿನವರಿಗೆ ವೃತ್ತಿ ಸಾಮಾನ್ಯವಾಗಿ ಟೀವಿಯಿಂದಲೇ ಆರಂಭವಾಗುತ್ತದೆ. 'ಶಾಂತಂ ಪಾಪಂ'ನಲ್ಲಿ ಮೊದಲು ಕಾಣಿಸಿಕೊಂಡೆ. ಮೂರು ಎಪಿಸೋಡ್ ಮಾಡಿದ ಬಳಿಕ 'ಮಂಗಳಗೌರಿ'ಗೆ ನೆಗೆಟಿವ್ ಪಾತ್ರ ಸಿಕ್ಕಿತು. ಅದರ ಸೂರ್ಯ ಪಾತ್ರ ತುಂಬ ಖ್ಯಾತಿ ಆಯಿತು. ನಂತರ ತೆಲುಗು ತಮಿಳಿನಲ್ಲಿ ನೆಗೆಟಿವ್ ಪಾತ್ರವನ್ನೇ ಮಾಡಿದೆ. ಹೀರೊ ಪಾತ್ರಕ್ಕೆ ಹೆಚ್ಚಿನ ಮನ್ನಣೆ ಪ್ರಶಂಸೆ ಸಿಗುತ್ತದೆ. ಅದೇ ಕಾರಣಕ್ಕೆ ಈ ಪಾತ್ರವನ್ನು ಆಯ್ಕೆ ಮಾಡಿಕೊಂಡೆ.

◆ ನಿಮ್ಮ ಧ್ವನಿಯನ್ನು ದುಡಿಸುವ ಪ್ರಯತ್ನ ಮಾಡಲಿಲ್ಲವೇ?

ಡಬ್ಬಿಂಗ್ ಮಾಡಿದೆ. ಒಂದೆರಡು ಅವಕಾಶ ಬಂದರೂ ಪೂರ್ಣ ಪ್ರಮಾಣದಲ್ಲಿ ಸಿಕ್ಕಲಿಲ್ಲ. ನನಗೆ ನಟನೆ ಕಡೆ ಹೆಚ್ಚು ಫೋಕಸ್ ಇರುವುದರಿಂದ ಆ ಬಗ್ಗೆ ಹೆಚ್ಚು ಯೋಚನೆ ಮಾಡಲಿಲ್ಲ. ಡಬ್ಬಿಂಗ್ ಬೇರೆಯದೇ ಟ್ರ್ಯಾಕ್ ಆಗುವುದರಿಂದ ಅವಕಾಶ ಅದಾಗಿಯೇ ಬಂದರೆ ಮಾಡಬೇಕು ಎಂದುಕೊಂಡಿದ್ದೆ. ಏಕೆಂದರೆ ಅಭಿನಯದ ಜೊತೆ ಬೇರೆ ಕೆಲಸಗಳ ಒತ್ತಡ ಇದ್ದಿದ್ದರಿಂದ ಆ ಹುಡುಕಾಟ ಮಾಡಲಿಲ್ಲ.

◆ ಬೇರೆ ಇನ್ನೇನು ಮಾಡುತ್ತೀರಿ?

ಕಿರುಚಿತ್ರ ಒಂದನ್ನು ನಾನೇ ಬರೆದು ನಿರ್ದೇಶನ ಮಾಡಿದೆ. ಅದಕ್ಕೆ ಡೈಲಾಗ್ ಗೆಳೆಯ ಹರ್ಷ ಮಾಡಿದರು. ಟ್ರಾನ್ಸ್ ಜೆಂಡರ್, ಲೈಂಗಿಕ ಕಾರ್ಯಕರ್ತೆ ಮತ್ತು ಮುಟ್ಟಿಗೆ ಸಂಬಂಧಿಸಿದ ವಿಷಯದ ಮೇಲೆ ಸಿನಿಮಾ ಮಾಡಿದ್ದೇನೆ. ಇನ್ನೂ ವೀಕ್ಷಕ ವಲಯಕ್ಕೆ ದಾಟಿಸಿಲ್ಲ. ಒಳ್ಳೆಯ ವೇದಿಕೆಯಲ್ಲಿ ಅದನ್ನು ತೋರಿಸಬೇಕು ಎನ್ನುವ ಚಿಂತನೆ ಇದೆ. ಅದರ ಪೋಸ್ಟರ್ ಕೂಡ ನಾನೇ ಡಿಸೈನ್ ಮಾಡಿದ್ದೇನೆ. ಈ ಕ್ಷೇತ್ರದಲ್ಲಿ ಒಳ್ಳೆಯ ಅವಕಾಶಕ್ಕಾಗಿ ಕಾಯುತ್ತಿದ್ದೇನೆ. ನೆಗೆಟಿವ್ ಪಾಸಿಟಿವ್ ಅನ್ನುವುದಕ್ಕಿಂತ ನನ್ನಲ್ಲಿ ಒಳ್ಳೆಯ ನಟನನ್ನು ಹುಡುಕಬೇಕು.

◆ ನಿಮ್ಮ ಲವ್ ಸ್ಟೋರಿ ಕಥೆ ತುಂಬ ಹರಿದಾಡಿತ್ತು?

ನಿಶ್ಚಿತಾರ್ಥ ಆಗಿದೆ. ಮದುವೆ ಅಕ್ಟೋಬರ್ 26–27ರಂದು ಆಗಲಿದೆ. ನಮ್ಮಿಬ್ಬರನ್ನು ನೋಡಿದ ತಕ್ಷಣ ಎಲ್ಲರೂ ಲವ್ ಮ್ಯಾರೇಜಾ ಎಂದು ಕೇಳುತ್ತಾರೆ. ನಾನು ಅದಕ್ಕೆ ಹೌದು ಎಂದು ತಲೆ ಅಲ್ಲಾಡಿಸಿದ್ದೆ. ಕೊನೆಗೆ ಎಲ್ಲರಿಗೂ ಆ ವಿಷಯದಲ್ಲಿ ಲವ್ ಮ್ಯಾರೇಜ್ ಎಂದು ಸುಳ್ಳು ಹೇಳುತ್ತಾ ಬಂದಿದ್ದೆ. ಈಗ ನಿಜ ಹೇಳುತ್ತಿದ್ದೇನೆ, ನನ್ನ ಹೆಂಡತಿ ಆಗುತ್ತಿರುವ ಹುಡುಗಿ ದಿಶಾ. ನಮಗೆ ದೂರದ ಸಂಬಂಧಿ ಕೂಡ. ಆದರೂ ನಮಗೆ ಪರಿಚಯ ಇರಲಿಲ್ಲ. ನಮ್ಮ ಮನೆಯವರೆಲ್ಲ ನೋಡಿ ಇಷ್ಟಪಟ್ಟು ಮದುವೆ ಮಾಡುತ್ತಿದ್ದಾರೆ. ಈಗ ಲವ್ ಮಾಡುತ್ತಿದ್ದೇವೆ.

◆ ನಿಮ್ಮ ಕನಸಿನ ಪಾತ್ರದ ಬಗ್ಗೆ ಹೇಳಲಿಲ್ಲವಲ್ಲ?

ಕನಸು ಇದೆ. ದೊಡ್ಡ ಮಟ್ಟದಲ್ಲಿ ದೇಶಭಕ್ತಿಯ ಸಿನಿಮಾ ಮಾಡಬೇಕು. ಅದರಲ್ಲಿ ಒಳ್ಳೆಯ ಕಮಾಂಡೊ ಆಗಬೇಕು. ನಾನು ದೇಶಪ್ರೇಮದ ಅನೇಕ ವಿಡಿಯೊ ನೋಡುತ್ತೇನೆ. ನಮ್ಮ ಚಂದನವನದಲ್ಲಿ ಕನ್ನಡ ಮೂಲದ್ದೇ ಕಥೆಯ ಸಿನಿಮಾದಲ್ಲಿ ನಟಿಸಬೇಕು. ಅದು ಮಾಸ್ ಸಿನಿಮಾ ಆಗಬೇಕು. ತಾಂತ್ರಿಕವಾಗಿ ಸಖತ್ ಆಗಿರುವ ದೇಶಭಕ್ತಿಯ ರಸವನ್ನು ಬಿಂಬಿಸಬೇಕು.

■ ರಾಘವೇಂದ್ರ ಕೆ.